


# ಚೋಖಾಮೇಳ

ಕಥೆ : ಕೆ ಅಳಗರಾಜ


ಚಿತ್ರ: ಗೋವಿ




**5** ಚೋಖಾಮೇಳನು ಭಾವೋನ್ಮತ್ತನಾಗಿ ಸಮಾಧಿ ಸ್ಥಿತಿಗೆ ಹೋದ. ಆಗ ದೇವಾಲಯದ ಬಾಗಿಲುಗಳು ತಾವಾಗಿಯೇ ತೆರೆದುಕೊಂಡವು. ತಾವಾಗಿಯೇ ದೀಪಗಳು ಬೆಳಗಿದವು, ಗಂಟೆಗಳು ಮೊಳಗಿದವು. ಪಂಡರೀನಾಥನು ತನ್ನ ದಿವ್ಯಮೂರ್ತಿಯನ್ನು ತೋರಿ ಅವನ ಮುಂದೆ ಪ್ರತ್ಯಕ್ಷನಾದನು. ಚೋಖಾಮೇಳ ಮೈಮರೆತ; ದೇವರ ಮುಂದೆ ನಮಸ್ಕರಿಸಿ, ನೆಲದಲ್ಲಿ ಹೊರಳಾಡುತ್ತ ಒಂದೇ ಸಮನೆ ಅಳಲಾರಂಭಿಸಿದ.




**6** ಮಧ್ಯರಾತ್ರಿಯಲ್ಲಿ ದೇವಾಲಯದ ಗಂಟೆಯ ಸದ್ದನ್ನು ಕೇಳಿದ ಅರ್ಚಕರು ಅಲ್ಲಿಗೆ ಓಡೋಡಿ ಬಂದರು. ದೇಗುಲದ ಒಳಗೆ ಚೋಖಾಮೇಳನು ಧ್ಯಾನ ಮಾಡುತ್ತಿದ್ದುದನ್ನು ಕಂಡು ಅವರಿಗೆ ಆಘಾತವಾಯಿತು. ಚೋಖಾಮೇಳನು ಅಲ್ಲಿಗೆ ಕದಿಯಲು ಬಂದಿದ್ದಾನೆಂದು ಕೆಲವರು ಕೂಗಾಡಿದರು. ಉಳಿದ ಮಂದಿ ಕೂಡ ಅವನನ್ನು ಕ್ರೂರವಾಗಿ ನಡೆಸಿಕೊಂಡರು.





**7** ಈ ಘಟನೆಯ ನಂತರ ಚೋಖಾಮೇಳನು ಚಂದ್ರಭಾಗಾ ನದಿಯ ಇನ್ನೊಂದು ದಡದಲ್ಲಿ ಜೀವಿಸತೊಡಗಿದ. ಅವನು ಏಕಾದಶಿಯಂದು ರಾತ್ರಿ ಭಜನೆ ಹಾಡುತ್ತಿದ್ದ. ಮರುದಿನ ಬೆಳಿಗ್ಗೆ ಸ್ನಾನ ಮಾಡಿ, ತುಳಸಿಯ ನೀರನ್ನು ಕುಡಿಯುತ್ತಿದ್ದ. ಹೀಗಿರುವಾಗ ಒಂದು ದಿನ ಊರ್ಧ್ವಪುಂಡ್ರ ನಾಮವನ್ನು ಹಣೆಯಲ್ಲಿ ಧರಿಸಿದ ವೃದ್ಧನೊಬ್ಬ ಅಲ್ಲಿಗೆ ಬಂದ.




**8**




9
ಆ ವೃದ್ಧನು ಪ್ರತಿ ದ್ವಾದಶಿಯಂದು ಅಲ್ಲಿಗೆ ಬರತೊಡಗಿದ. ಅವನು ಬೇರಾರೂ ಅಲ್ಲ , ಸರಳರೂ ಸಾಮಾನ್ಯರೂ ಆದ ಜನರ ಹೃದಯದಲ್ಲಿ ವಾಸಮಾಡುವ ಭಗವಾನ್ ವಿಠಲನೇ ಎಂದು ಚೋಖಾಮೇಳ ದಂಪತಿಗಳಿಗೆ ಅರಿವಾಯಿತು. ಒಂದು ದ್ವಾದಶಿಯ ದಿನ ಚೋಖಾಮೇಳನು ಗಾಢನಿದ್ರೆಯಲ್ಲಿದ್ದ. ಸ್ವಲ್ಪ ಹೊತ್ತಿನ ನಂತರ ಇದ್ದಕ್ಕಿದ್ದಂತೆ ಎಚ್ಚರಗೊಂಡ.
ನಾನೇಕೆ ಹೀಗೆ ನಿದ್ದೆ ಹೋದೆ? ಈಗ ಅವನು ಬರುವ ಸಮಯ. ಬೇಗನೆ ಅಡುಗೆ ಮಾಡಿ ಮುಗಿಸು. ನಾನು ಸ್ನಾನ ಮಾಡಿ ಬರುತ್ತೇನೆ.
ಆಗಲಿ, ಸ್ವಾಮಿ. ಹಾಗೇ ಮಾಡುತ್ತೇನೆ.
10
ಚೋಖಾಮೇಳನು ಭಕ್ತಿಯಿಂದ ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡಲು ಹೋದಾಗ ಜನರು ಅವನನ್ನು ತಡೆದರು.
ಸ್ವಾಮಿ, ಆಹಾರ ಸೇವಿಸಲು ದೇವರು ನನ್ನ ಮನೆಗೆ ಬಂದಿದ್ದಾನೆ. ಅವನ ಸೇವೆ ಮಾಡುವ ಮೊದಲು ಸ್ನಾನ ಮಾಡಲು ನಾನಿಲ್ಲಿಗೆ ಬಂದೆ.
ಏನು! ದೇವರು ಬಂದಿದ್ದಾನೆಯೆ? ದೇವರು ನಿನ್ನ ಮನೆಗೆ ಬಂದಿರಲು ಸಾಧ್ಯವೇ ಇಲ್ಲ!
ಚೋಖಾಮೇಳನು ದೇವರಿಗೆ ಅಗೌರವ ತೋರಿಸಿದ್ದಾನೆ ಎಂದು ರಾಜನವರೆಗೂ ದೂರು ಹೋಯಿತು.
11
ರಾಜನ ಬಳಿಗೆ ಚೋಖಾಮೇಳನನ್ನು ಕರೆತಂದರು.
ಭಗವಾನ್ ಪಂಡರೀನಾಥನೇ ನಿನ್ನ ಮನೆಗೆ ಆಹಾರಕ್ಕೆ ಬಂದಿದ್ದಾನೆ ಎಂದು ನೀನು ಹೇಳುತ್ತಿದ್ದೀಯಾ?
ಹೌದು, ಮಹಾರಾಜ!
ಮೂರ್ಖ! ನಿನಗೆ ದೇವರ ಭಯವಿಲ್ಲ. ಇತ್ತ ಬಾ. ಯಾರಲ್ಲಿ? ಇವನು ಮಾಡಿದ ತಪ್ಪಿಗಾಗಿ ಇವನನ್ನು ಭೀಕರ ಹೋರಿಗಳ ನಡುವೆ ಹಾಕಿಬಿಡಿ. ಅವೆಲ್ಲ ಸೇರಿ ಇವನನ್ನು ತಿವಿದು ಕೊಲ್ಲಲಿ.
ರಾಜಾಜ್ಞೆಯಂತೆ ಚೋಖಾಮೇಳನನ್ನು ಕಾಡಿನ ಮಧ್ಯೆ ಬಿಟ್ಟುಬಿಟ್ಟರು. ಒಬ್ಬ ರಾಜಭಟನು ದೂರದಲ್ಲಿ ಅಡಗಿ ನಿಂತು ಅವನನ್ನು ಗಮನಿಸುತ್ತಿದ್ದ. ಚೋಖಾಮೇಳನಂತಹ ನಿಜವಾದ ಭಕ್ತರಿಗೆ ಏನಾಗುವುದೋ ಎಂದು ಅವನಿಗೆ ಚಿಂತೆಯಾಯಿತು. ಆದರೆ ಚೋಖಾಮೇಳನು ಮೈಮರೆತು ವಿಠಲನ ಕೀರ್ತನೆ ಹಾಡುತ್ತಲೇ ಇದ್ದ. ಅಷ್ಟರಲ್ಲಿ ...
12
ವಿಠಲ ವಿಠಲ! ಪಾಂಡುರಂಗ!
ಇದೇನು ವಿಚಿತ್ರ! ಹೋರಿಗಳೆಲ್ಲವೂ ಚೋಖಾಮೇಳನ ಸುತ್ತ ಉನ್ಮತ್ತವಾಗಿ ನಿಂತಿವೆಯಲ್ಲ!

13 ಆ ರಾಜಭಟನು ಕೂಡಲೇ ರಾಜನ ಬಳಿಗೆ ಓಡಿಹೋಗಿ, ತಾನು ಕಂಡದ್ದನ್ನೆಲ್ಲ ವಿವರಿಸಿದ. ಚೋಖಾಮೇಳನ ಹಿರಿಮೆ ರಾಜನಿಗೂ ಅರ್ಥವಾಯಿತು; ಅವನನ್ನು ನೋಡಲು ಅವನಿದ್ದಲ್ಲಿಗೆ ಓಡಿದ. ಅವನನ್ನು ಕೂಡಲೇ ಬಿಡಿಸಿ ತರಲು ಆಜ್ಞಾಪಿಸಿದ. ಆನಂದದಿಂದ ಚೋಖಾಮೇಳ ಮನೆಗೆ ಮರಳಿದ.


ಎಂದಿನಂತೆ ದ್ವಾದಶಿಯ ದಿನ ಅದೇ ವೃದ್ಧನು ಆಹಾರಕ್ಕಾಗಿ ಅವರ ಮನೆಗೆ ಬಂದ. ಆಗ ...




ಆ ದಾರಿಯಲ್ಲೇ ಹೋಗುತ್ತಿದ್ದ ಕೆಲವರು ಈ ಮಾತುಕತೆಗಳನ್ನು ಕೇಳಿಸಿಕೊಂಡರು. ಕೆಳಜಾತಿಯವನಾದ ಚೋಖಾಮೇಳನ ಮನೆಯಲ್ಲಿ ದೇವರು ಊಟ ಮಾಡಿದನೆಂಬುದನ್ನು ಅವನಿಗೆ ಸಹಿಸಲಾಗಲಿಲ್ಲ. ಅವನು ಚೋಖಾಮೇಳನಿಗೆ ಕೋಪದಿಂದ ಚೆನ್ನಾಗಿ ಬಾರಿಸಿಬಿಟ್ಟ. ಅನಂತರ ಅವನು ದೇವಾಲಯಕ್ಕೆ ಹೋದ.

14 ಅದೇನು ಆಶ್ಚರ್ಯ! ಆ ಬ್ರಾಹ್ಮಣನು ದೇವಾಲಯಕ್ಕೆ ಹೋಗಿ ನೋಡಿದಾಗ, ದೇವರ ಕೆನ್ನೆ ಊದಿಕೊಂಡು, ಕೆಂಪು ಬಣ್ಣಕ್ಕೆ ತಿರುಗಿತ್ತು. ದೇವರ ಪೀತಾಂಬರದಲ್ಲಿ ಮೊಸರು ಚೆಲ್ಲಿದ ಗುರುತುಗಳಿದ್ದವು. ಅದನ್ನು ನೋಡಿದ ಅರ್ಚಕರೂ ಭಕ್ತರೂ ಸ್ತಂಭೀಭೂತರಾದರು. ಸಾಕಷ್ಟು ವಿಚಾರಿಸಿದ ಮೇಲೆ ತಿಳಿದು ಬಂತು, ಆ ಬ್ರಾಹ್ಮಣ ಚೋಖಾಮೇಳನ ಕೆನ್ನೆಗೆ ಬಾರಿಸಿದ್ದರಿಂದಲೇ ದೇವರ ಕೆನ್ನೆ ಊದಿಕೊಂಡಿತ್ತು ಎಂಬುದಾಗಿ.

15 ಚೋಖಾಮೇಳನನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಬೇಕೆಂದು ಪಂಡರೀನಾಥನು ಅರ್ಚಕನನ್ನು ಕಳುಹಿಸಿದ.




''ದೇವರು ದಿವ್ಯವಾದ ಕಣ್ಣುಗಳನ್ನು ನೀಡುತ್ತಾನೆ. ಆಗ ಮಾತ್ರ ಅವನನ್ನು ನಾವು ನೋಡಬಹುದು. ಅರ್ಜುನನಿಗೆ ಅವನು ದಿವ್ಯ ಚಕ್ಷುಗಳನ್ನು ನೀಡಿದ; ಆಗ ಮಾತ್ರವೇ ಅವನು ದೇವರ ವಿಶ್ವರೂಪವನ್ನು ನೋಡಲು ಸಾಧ್ಯವಾಯಿತು.

''ಭಗವಂತನನ್ನು ನೋಡಲು ನಮಗೆ ಎಂತಹ ಪ್ರೀತಿ ಇರಬೇಕು ಗೊತ್ತೆ? ಪತಿಯ ಮೇಲೆ ನಿಷ್ಠಾವಂತ



ಪತ್ನಿಗಿರುವ ಪ್ರೀತಿ, ಜಿಪುಣನಿಗೆ ತನ್ನ ಸಂಪತ್ತಿನ ಮೇಲಿರುವ ಪ್ರೀತಿ, ಪ್ರಾಪಂಚಿಕರಿಗೆ ತಮ್ಮ ಪ್ರಾಪಂಚಿಕ ವಸ್ತುಗಳ ಮೇಲಿರುವ ಪ್ರೀತಿ — ಇವು ಮೂರನ್ನೂ ಒಂದುಗೂಡಿಸಿದಾಗ ಎಂತಹ ಪ್ರೀತಿ ಉಂಟಾಗುವುದೋ, ಅಂತಹ ಪ್ರೀತಿ ಭಗವಂತನ ಮೇಲೆ ಉಂಟಾದಾಗ ನಿನಗೆ ಅವನ ದರ್ಶನ ದೊರಕುವುದು.''

-ಶ್ರೀರಾಮಕೃಷ್ಣರು